(1)

# ಕರ್ನಾಟಕ ಸರ್ಕಾರದ ನಡವಳಿಗಳು

| | |
|---|---|
| **ವಿಷಯ :** | ರಾಜ್ಯದಲ್ಲಿ ಪ್ರಾರಂಭಿಸಿರುವ 74 ಆದರ್ಶ ವಿದ್ಯಾಲಯಗಳಿಗೆ ಶಿಕ್ಷಕರನ್ನು ನೇಮಕಾತಿ ಮಾಡುವ ಕುರಿತು. |
| **ಓದಲಾಗಿದೆ:** | 1) ಕೇಂದ್ರ ಸರ್ಕಾರದ ಪತ್ರ ಸಂಖ್ಯೆ:F.2-17/2009-Sch-1(vol-11)ದಿ: 04.09.2011<br>2) ಸರ್ಕಾರದ ಆದೇಶ ಸಂಖ್ಯೆ: ಇಡಿ 90 ಎಂಸಿಡಿ 2010 ದಿ: 10.08.2010.<br>3) ರಾಜ್ಯ ಯೋಜನಾ ನಿರ್ದೇಶಕರು, ಆರ್‌ಎಮ್‌ಎಸ್‌ಎ ಇವರ ಪತ್ರ ಸಂಖ್ಯೆ:ಆರ್‌ಎಮ್‌ಎಸ್‌ಎ/ಎವಿಟೀಚರ್.ಸಿ.ಆರ್/47/201-11ದಿ: 07.09.2011.<br>4) ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ ರವರ ಪತ್ರ ಸಂಖ್ಯೆ: ಸಿ4(1) ಆವಿ/ಶಿ.ನೇ/01/11-12 ದಿ: 08.09.2011. |

**ಪ್ರಸ್ತಾವನೆ :**

1) ಮೇಲೆ (1)ರಲ್ಲಿ ಓದಲಾದ ಕೇಂದ್ರ ಸರ್ಕಾರದ ಪತ್ರದಲ್ಲಿ ಕೇಂದ್ರ ಪುರಸ್ಕೃತ ಯೋಜನೆಯಡಿಯಲ್ಲಿ ರಾಜ್ಯದ 22ಜಿಲ್ಲೆಗಳ 74 ಶೈಕ್ಷಣಿಕವಾಗಿ ಹಿಂದುಳಿದ ತಾಲ್ಲೂಕುಗಳಿಗೆ ಮಾದರಿ ಶಾಲೆಗಳು ಮಂಜೂರಾಗಿರುತ್ತದೆ.

2) ಮೇಲೆ (2)ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಶಾಲೆಗಳನ್ನು ಆಂಗ್ಲ ಮಾಧ್ಯಮದಲ್ಲಿ ಪ್ರಾರಂಭಿಸಲು ಹಾಗೂ ಅವಶ್ಯಕ ಶಿಕ್ಷಕರ ನೇಮಕಾತಿ ಕೇಂದ್ರಿಯ ವಿದ್ಯಾಲಯ ಶಾಲೆಗಳ ಮಾದರಿಯಲ್ಲಿ ಮಾಡಿಕೊಳ್ಳಲು ಆದೇಶ ನೀಡಲಾಗಿದೆ.

3) ಮೇಲೆ (3) ಮತ್ತು (4)ರಲ್ಲಿ ಓದಲಾದ ಪತ್ರದಲ್ಲಿ, ರಾಜ್ಯ ಯೋಜನಾ ನಿರ್ದೇಶಕರು, ಆರ್‌ಎಂಎಸ್‌ಎ ಮತ್ತು ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ರವರು ಮೇಲಿನ (1) ಮತ್ತು (2)ರ ಆದೇಶದನ್ವಯ ರಾಜ್ಯದಲ್ಲಿ "ಆದರ್ಶ ವಿದ್ಯಾಲಯ" ಹೆಸರಿನಲ್ಲಿ 2010-11ನೇ ಸಾಲಿನಿಂದ ಆಂಗ್ಲ ಮಾಧ್ಯಮದಲ್ಲಿ ತಾತ್ಕಾಲಿಕ ವ್ಯವಸ್ಥೆಯಲ್ಲಿ 6ನೇ ತರಗತಿಯೊಂದಿಗೆ ಆರಂಭಿಸಲಾಗಿದೆ. ಈ ಶಾಲೆಗಳಲ್ಲಿ 10ನೇ ತರಗತಿಗಳನ್ನು ಪ್ರಾರಂಭಿಸಲು ಕ್ರಮ ವಹಿಸಿದ್ದು, ಕೇಂದ್ರ ಸರ್ಕಾರದ ಮಾರ್ಗಸೂಚಿಯಂತೆ ಈ ಶಾಲೆಗಳಲ್ಲಿ 12ನೇ ತರಗತಿಯವರೆಗೆ ತರಗತಿಗಳನ್ನು ಪ್ರಾರಂಭಿಸ ಬೇಕಾಗಿರುತ್ತದೆ. ಇದರ ಆಧಾರದ ಮೇಲೆ 6 ರಿಂದ 8 ನೇ ತರಗತಿಯವರೆಗೆ ಆದರ್ಶ ವಿದ್ಯಾಲಯಗಳಿಗೆ ಈ ಕೆಳಗಿನಂತೆ ಶಿಕ್ಷಕರನ್ನು ನೇಮಕಾತಿ ಮಾಡಿಕೊಳ್ಳಲು ಸರ್ಕಾರದ ಅನುಮತಿ ನೀಡುವಂತೆ ಕೋರಿ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

| ಕ್ರ.ಸಂ | ವಿಷಯ | ಶಿಕ್ಷಕರ ಸಂಖ್ಯೆ |
|---|---|---|
| 1 | ಮುಖ್ಯ ಶಿಕ್ಷಕರು | 74 |
| 2 | ಪ್ರಥಮ ಭಾಷೆ – ಆಂಗ್ಲ | 74 |
| 3 | ದ್ವಿತೀಯ ಭಾಷೆ – ಕನ್ನಡ | 74 |
| 4 | ತೃತೀಯ ಭಾಷೆ – ಹಿಂದಿ | 74 |
| 5 | ಗಣಿತ ಪಿ.ಸಿ.ಎಂ | 74 |
| 6 | ವಿಜ್ಞಾನ ಸಿ.ಬಿ.ಜೆಡ್ | 74 |

| | | |
|---|---|---|
| 7 | ಸಮಾಜ ವಿಜ್ಞಾನ | 74 |
| 8 | ದೈಹಿಕ ಶಿಕ್ಷಣ | 74 |
| | ಒಟ್ಟು | 592 |

ರಾಜ್ಯ ಸರ್ಕಾರದಲ್ಲಿ ಇತರೆ ಶಿಕ್ಷಕರಾದ ಕ್ರಾಫ್ಟ್ ಸಂಗೀತ ಡ್ರಾಯಿಂಗ್ ಮುಂತಾದ ವಿಷಯಗಳಿಗೆ ನೇಮಕಾತಿ ಮಾಡಿಕೊಳ್ಳುವ ಬಗ್ಗೆ ನೀತಿ ರಚನೆಯಾಗದಿರುವುದರಿಂದ ಈ ಶಿಕ್ಷಕರನ್ನು ಅರೆಕಾಲಿಕ ಶಿಕ್ಷಕರಾಗಿ ಸ್ಥಳೀಯವಾಗಿ ಗೌರವಧನದ ಆದಾರದದಲ್ಲಿ ಶಾಲೆಗಳ ಮುಖ್ಯ ಶಿಕ್ಷಕರು ನೇಮಿಸಿಕೊಳ್ಳಲು ಅವಕಾಶ ಕಲ್ಪಿಸಬಹುದಾಗಿರುತ್ತದೆ. ಈ ಕುರಿತಂತೆ ಗೌರವಧನವನ್ನು ರೂ.5000/-ಕ್ಕೆ ನಿಗದಿ ಪಡಿಸಲು ಸರ್ಕಾರದ ಆದೇಶ ಪಡೆದು ಮಾರ್ಗಸೂಚಿ ಹೊರಡಿಸಬಹುದಾಗಿರುತ್ತದೆ. ಅರೆಕಾಲಿಕ ಶಿಕ್ಷಕರ ವಿವರಗಳು ಈ ಕೆಳಗಿನಂತಿರುತ್ತದೆ.

| ಕ್ರ.ಸಂ | ವಿಷಯ | ಶಿಕ್ಷಕರ ಸಂಖ್ಯೆ |
|---|---|---|
| 1 | ಕ್ರಾಫ್ಟ್ | 74 |
| 2 | ಸಂಗೀತ | 74 |
| 3 | ಡ್ರಾಯಿಂಗ್ | 74 |
| | ಒಟ್ಟು | 222 |

4) ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿದ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ : ಇಡಿ 90 ಎಂಸಿಡಿ 2010(ಭಾಗ), ಬೆಂಗಳೂರು ದಿನಾಂಕ : 30-11-2011,**

5) ಮೇಲಿನ ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ "ಆದರ್ಶ ವಿದ್ಯಾಲಯ" ಹೆಸರಿನಲ್ಲಿ 2010-11ನೇ ಸಾಲಿನಿಂದ ಪ್ರಾರಂಭಿಸಿರುವ ಆಂಗ್ಲ ಮಾಧ್ಯಮಗಳ 6 ರಿಂದ 8ನೇ ತರಗತಿಯವರೆಗೆ ಬೋಧಿಸುವ 74 ಆದರ್ಶ ವಿದ್ಯಾಲಯಗಳಿಗೆ ವಿಷಯವಾರು ಶಿಕ್ಷಕರಂತೆ ಒಟ್ಟು-592 ಶಿಕ್ಷಕರನ್ನು ಹಾಗೂ ಕ್ರಾಫ್ಟ್, ಸಂಗೀತ, ಡ್ರಾಯಿಂಗ್ ವಿಷಯಗಳಿಗೆ ಅರೆಕಾಲಿಕಾ ತಲಾ 74 ಶಿಕ್ಷಕರಂತೆ ಒಟ್ಟು 222 ಶಿಕ್ಷಕರನ್ನು ಹಾಗೂ 148 ಗ್ರೂಪ್ 'ಡಿ' ಸಿಬ್ಬಂದಿ ಒಟ್ಟು 962 ಮಂದಿಯನ್ನು ನೇರ ನೇಮಕಾತಿ ಮುಖಾಂತರ ನೇಮಕಾತಿ ಮಾಡಿಕೊಳ್ಳಲು ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರಿಗೆ ಸರ್ಕಾರ ಅನುಮತಿ ನೀಡಿದೆ.

6) ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ 704 ವೆಚ8/2011 ದಿ: 18.10.2011ರ ಸಹಮತಿ ಅನ್ವಯ ಹೊರಡಿಸಲಾಗಿದೆ.

**ಷರತ್ತುಗಳು:**

೧) ಪೂರ್ಣಕಾಲಿಕ ಶಿಕ್ಷಕರು, ಅರೆಕಾಲಿಕ ಶಿಕ್ಷಕರು, ಮತ್ತು ಗ್ರೂಪ್ ಡಿ ಸಿಬ್ಬಂದಿಯ ನೇಮಕಾತಿಯು ಆದೇಶ ನೀಡಿರುವ ಸಂಖ್ಯೆಯನ್ನು ಮೀರಿರಬಾರದು.

೨) ಭಾಷಾ ಶಿಕ್ಷಕರು, ಮತ್ತು ದೈಹಿಕ ಶಿಕ್ಷಕರನ್ನು ಹೊರತುಪಡಿಸಿ ಉಳಿದ ಗಣಿತ, ವಿಜ್ಞಾನ ಮತ್ತು ಸಮಾಜ ವಿಜ್ಞಾನ ಶಿಕ್ಷಕರು ಪದವಿಯಲ್ಲಿ ಆಂಗ್ಲ ಮಾಧ್ಯಮದಲ್ಲಿ ಅಭ್ಯಾಸ ಮಾಡಿದವರನ್ನು ನೇಮಕ ಮಾಡಿಕೊಳ್ಳ ಬೇಕು.

೩) 6 ರಿಂದ 8ನೇ ತರಗತಿವರೆಗೆ ಶಿಕ್ಷಕರ ನೇಮಕಾತಿ ಮಾಡಿಕೊಳ್ಳುವಾಗ NCTE ನಿಗದಿಪಡಿಸಿರುವ ವಿದ್ಯಾರ್ಹತೆಯನ್ನು ಅನುಸರಿಸ ಬೇಕು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ.

(ಐ ಎಫ್. ಮಾಗಿ)
ವಿಶೇಷಾಧಿಕಾರಿ ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ
ಶಿಕ್ಷಣ ಇಲಾಖೆ. (ಯೋಜನೆ)

ಇವರಿಗೆ :

1. ಸಂಕಲನಕಾರರು, ಕರ್ನಾಟಕ ಗೆಜೆಟ್, ಬೆಂಗಳೂರು.
2. ಮಹಾಲೇಖಪಾಲಕರು, ಕರ್ನಾಟಕ (ಆಡಿಟ್ 1 ಮತ್ತು2) ಬೆಂಗಳೂರು.
3. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.
4. ರಾಜ್ಯ ಯೋಜನಾ ನಿರ್ದೇಶಕರು, ಆರ್‌ಎಂಎಸ್‌ಎ, ಸರ್ವ ಶಿಕ್ಷಣ ಅಭಿಯಾನ, ಬೆಂಗಳೂರು.
5. ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ನಿರ್ದೇಶಕರು, ಜಂಟಿ/ಸಹ/ಉಪ ನಿರ್ದೇಶಕರು (ರಾಜ್ಯ ಯೋಜನಾ ನಿರ್ದೇಶಕರ ಮೂಲಕ)
6. ಸರ್ಕಾರದ ಉಪ ಕಾರ್ಯದರ್ಶಿಗಳು-2, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
7. ನಿರ್ದೇಶಕರು, (ಜನಶಕ್ತಿ, ಮತ್ತು ಉದ್ಯೋಗ ವಿಭಾಗ), ಯೋಜನಾ ಇಲಾಖೆ, ಬೆಂಗಳೂರು.
8. ಸರ್ಕಾರದ ಉಪ ಕಾರ್ಯದರ್ಶಿ ಮತ್ತು ಅಂತರಿಕ ಆರ್ಥಿಕ ಸಲಹೆಗಾರರು, ಶಿಕ್ಷಣ ಇಲಾಖೆ, ಬೆಂಗಳೂರು.
9. ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳು (ಸಚಿವ ಸಂಪುಟ), ವಿಧಾನ ಸೌಧ, ಬೆಂಗಳೂರು.
10. ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
11. ಸರ್ಕಾರದ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ, ಬೆಂಗಳೂರು.
12. ಸರ್ಕಾರದ ಉಪ ಕಾರ್ಯದರ್ಶಿಗಳು ಆಡಳಿತ/ಸೇವೆಗಳು, ಶಿಕ್ಷಣ ಇಲಾಖೆ, ಬೆಂಗಳೂರು.
13. ಸರ್ಕಾರದ ಅಧೀನ ಕಾರ್ಯದರ್ಶಿಗಳು, ಆಡಳಿತ/ಪ್ರಾಥಮಿಕ/ಪ್ರೌಢ/ಪದವಿ ಪೂರ್ವ, ಶಿಕ್ಷಣ ಇಲಾಖೆ, ಬೆಂಗಳೂರು.
14. ಮಾಹಿತಿ ಕೇಂದ್ರ, ಶಿಕ್ಷಣ ಇಲಾಖೆ(ಇ-ಆಡಳಿತ), ಬಹುಮಹಡಿಗಳ ಕಟ್ಟಡ, ಬೆಂಗಳೂರು.
15. ಶಾಖಾ ರಕ್ಷಾಕಡತ./ ಹೆಚ್ಚುವರಿ ಪ್ರತಿಗಳು.

# ಕರ್ನಾಟಕ ಸರ್ಕಾರ

ಸಂಖ್ಯೆ: ಇಡಿ 90 ಎಂಸಿಡಿ 2010 (ಬಾಗ)

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ: 18.02.2012

## ಸೇರ್ಪಡೆ ಆದೇಶ

**ವಿಷಯ :** ರಾಜ್ಯದಲ್ಲಿ ಪ್ರಾರಂಭಿಸಿರುವ 74 ಆದರ್ಶ ವಿದ್ಯಾಲಯಗಳಿಗೆ ಶಿಕ್ಷಕರನ್ನು ನೇಮಕಾತಿ ಮಾಡುವ ಕುರಿತು.

**ಉಲ್ಲೇಖ :-** 1. ಸರ್ಕಾರದ ಆದೇಶ ಸಂಖ್ಯೆ: ಇಡಿ 90 ಎಂಸಿಡಿ 2010 (ಬಾಗ), ದಿನಾಂಕ: 30.11.2011.

2. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ರವರ ಪತ್ರ ಸಂಖ್ಯೆ : ಸಿ4(1)ಅ.ವಿ.ಶಿ.ನೇ/01/2011-12 ದಿ : 02.02.2012.

-------

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (1)ರ ಸರ್ಕಾರದ ಆದೇಶದ ಷರತ್ತುಗಳ ಕ್ರಮ ಸಂಖ್ಯೆ: 3ರ ನಂತರ "೪) ಶಿಕ್ಷಕರ ಪದನಾಮವನ್ನು ಪ್ರಸ್ತುತ ಜಾರಿಯಲ್ಲಿರುವ ಸಿ & ಆರ್ ನಂತೆ ತಿದ್ದುಪಡಿ ಮಾಡುವುದು" ಎಂದು ಸೇರ್ಪಡೆ ಮಾಡಿ ಓದಿ ಕೊಳ್ಳತಕ್ಕದ್ದು.

ಉಳಿದ ಅಂಶಗಳು ಯಥಾವತ್ತಾಗಿ ಮುಂದುವರಿಯುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಐ.ಎಫ್. ಮಾಗಿ)
ವಿಶೇಷಾಧಿಕಾರಿ ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ
ಶಿಕ್ಷಣ ಇಲಾಖೆ (ಯೋಜನೆ).

ಇವರಿಗೆ:

1. ಸಂಕಲನಕಾರರು, ಕರ್ನಾಟಕ ಗೆಜೆಟ್, ಬೆಂಗಳೂರು.
2. ಮಹಾಲೇಖಪಾಲಕರು, ಕರ್ನಾಟಕ (ಆಡಿಟ್ 1 ಮತ್ತು2) ಬೆಂಗಳೂರು.
3. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.
4. ರಾಜ್ಯ ಯೋಜನಾ ನಿರ್ದೇಶಕರು, ಆರ್‌ಎಂಎಸ್‌ಎ, ಸರ್ವ ಶಿಕ್ಷಣ ಅಭಿಯಾನ, ಬೆಂಗಳೂರು.
5. ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ನಿರ್ದೇಶಕರು, ಜಂಟಿ/ಸಹ/ಉಪ ನಿರ್ದೇಶಕರು (ರಾಜ್ಯ ಯೋಜನಾ ನಿರ್ದೇಶಕರ ಮೂಲಕ)
6. ಸರ್ಕಾರದ ಉಪ ಕಾರ್ಯದರ್ಶಿಗಳು-2, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
7. ನಿರ್ದೇಶಕರು, (ಜನಶಕ್ತಿ, ಮತ್ತು ಉದ್ಯೋಗ ವಿಭಾಗ), ಯೋಜನಾ ಇಲಾಖೆ, ಬೆಂಗಳೂರು.

8. ಸರ್ಕಾರದ ಉಪ ಕಾರ್ಯದರ್ಶಿ ಮತ್ತು ಅಂತರಿಕ ಆರ್ಥಿಕ ಸಲಹೆಗಾರರು, ಶಿಕ್ಷಣ ಇಲಾಖೆ, ಬೆಂಗಳೂರು.
9. ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳು (ಸಚಿವ ಸಂಪುಟ), ವಿಧಾನ ಸೌಧ, ಬೆಂಗಳೂರು.
10. ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
11. ಸರ್ಕಾರದ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ, ಬೆಂಗಳೂರು.
12. ಸರ್ಕಾರದ ಉಪ ಕಾರ್ಯದರ್ಶಿಗಳು ಆಡಳಿತ/ಸೇವೆಗಳು, ಶಿಕ್ಷಣ ಇಲಾಖೆ, ಬೆಂಗಳೂರು.
13. ಸರ್ಕಾರದ ಅಧೀನ ಕಾರ್ಯದರ್ಶಿಗಳು, ಆಡಳಿತ/ಪ್ರಾಥಮಿಕ/ಪ್ರೌಢ/ಪದವಿ ಪೂರ್ವ, ಶಿಕ್ಷಣ ಇಲಾಖೆ, ಬೆಂಗಳೂರು.
14. ಮಾಹಿತಿ ಕೇಂದ್ರ, ಶಿಕ್ಷಣ ಇಲಾಖೆ(ಇ–ಆಡಳಿತ), ಬಹುಮಹಡಿಗಳ ಕಟ್ಟಡ, ಬೆಂಗಳೂರು.
15. ಶಾಖಾ ರಕ್ಷಾಕಡತ./ ಹೆಚ್ಚುವರಿ ಪ್ರತಿಗಳು.